

# ನಿರ್ಗಮಿಸಿದ ಬಿಗ್ ಬುಲ್

■ ಪ್ರವೀಣ ಕುಲಕರ್ಣಿ

ಷೇರುಪೇಟೆಯಲ್ಲಿ ಅಗಾಧ ಪ್ರಮಾಣದಲ್ಲಿ ಹೂಡಿಕೆ ಮಾಡುತ್ತಿದ್ದ ದಲಾಲ್ ಪೇಟೆಯ 'ಬಿಗ್ ಬುಲ್' ರಾಕೇಶ್ ಜುಂಝುನ್‌ವಾಲಾ ಅವರನ್ನು ಅರ್ಥಜಗತ್ತು ಗುರ್ತಿಸುತ್ತಿದ್ದುದು 'ಭಾರತೀಯ ವಾರೆನ್ ಬಫೆಟ್' ಎಂದೇ. 1985ರಲ್ಲಿ ಕೇವಲ ಐದು ಸಾವಿರ ರೂಪಾಯಿ ಬಂಡವಾಳದಿಂದ ಶುರುವಾದ ರಾಕೇಶ್ ಅವರ ಷೇರು ಹೂಡಿಕೆ ಯಾತ್ರೆ ಅವರನ್ನು ಮುಂದೆ ದೇಶದ ಮುಂಚೂಣಿ ಸಾಲಿನ ಉದ್ಯಮಿಗಳ ಸಾಲಿನಲ್ಲಿ ತಂದು ಕೂರಿಸಿದ್ದು ಈಗ ಇತಿಹಾಸ. ಜುಂಝುನ್‌ವಾಲಾ ಅವರು 'ಫೋಬ್ಸ್' ನಿಯತಕಾಲಿಕೆಯ 2021ರ ಪಟ್ಟಿಯ ಪ್ರಕಾರ, ದೇಶದ 36ನೆಯ ಅತಿ ಶ್ರೀಮಂತ ವ್ಯಕ್ತಿ. ಕಳೆದವಾರ ಅವರು ಕೊನೆಯುಸಿರು ಎಳೆದಾಗ ದಲಾಲ್ ಪೇಟೆಯಲ್ಲಿ ಒಂದು ರೀತಿಯಲ್ಲಿ ಮಂಕು ಆವರಿಸಿತ್ತು.

ಜುಂಝುನ್‌ವಾಲಾ ಅವರು ಷೇರು ಮಾರುಕಟ್ಟೆಗೆ ಪ್ರವೇಶಿಸಿದ ಕಾಲಘಟ್ಟವೇ ಅಂತಹದ್ದು. ಷೇರುಗಳಲ್ಲಿ ಹೂಡಿಕೆ ಮಾಡಿ ಹಣ ಸಂಪಾದನೆ ಮಾಡಿದವರನ್ನು ಆಗ 'ಅಕ್ರಮ ಎಸಗಿದವರು' ಎಂಬಂತೆ ಕಾಣಲಾಗುತ್ತಿತ್ತು. ಉದಾರೀಕರಣ ನಂತರದಲ್ಲಿ ಷೇರುಪೇಟೆಗಳನ್ನು ಅನುಮಾನದಿಂದ ನೋಡಲಾಗುತ್ತಿತ್ತು. ಜುಂಝುನ್‌ವಾಲಾ ಅವರ ಸಮಕಾಲೀನರಾದ ಹರ್ಷದ್ ಮೆಹ್ತಾ, ಕೇತನ್ ಪಾರೇಖ್ ಹೆಸರಿನ ಜೊತೆ ಕೆಲವು ಹಗರಣಗಳೂ ಸುತ್ತಿಕೊಂಡಿದ್ದವು. ಇಂತಹ ವ್ಯತಿರಿಕ್ತ ಸನ್ನಿವೇಶದಲ್ಲಿ ಪ್ರವಾಹದ ವಿರುದ್ಧ ಈಜಿದ ಜುಂಝುನ್‌ವಾಲಾ ಹೂಡಿಕೆಗಳ ಮೂಲಕವೇ ಅಂದಾಜು ₹ 46 ಸಾವಿರ ಕೋಟಿ ಸಂಪಾದನೆ ಮಾಡಿದ್ದು ಸಾಹಸಗಾಥೆಯೇ ಸರಿ.

ಜುಂಝುನ್‌ವಾಲಾ ಅವರು ಎಂತಹ ಹೂಡಿಕೆದಾರರಾಗಿದ್ದರು ಎಂದರೆ ಅವರು ಯಾವ ಕಂಪನಿಯ ಷೇರುಗಳಲ್ಲಿ ಹೂಡಿಕೆ ಮಾಡುತ್ತಾರೆ, ಯಾವ ಕಂಪನಿಯಿಂದ ಹೂಡಿಕೆ ಹಿಂದಕ್ಕೆ ಪಡೆಯುತ್ತಾರೆ ಎಂಬುದನ್ನು ದೇಶದ ಹೂಡಿಕೆದಾರರು ಕುತೂಹಲದಿಂದ ಗಮನಿಸುತ್ತಿದ್ದರು. ಅಂದಹಾಗೆ, ಜುಂಝುನ್‌ವಾಲಾ ಅವರ ತಂದೆ ಆದಾಯ ತೆರಿಗೆ ಇಲಾಖೆಯಲ್ಲಿ ಅಧಿಕಾರಿಯಾಗಿದ್ದರು. ಅವರದು ರಾಜಸ್ಥಾನಿ ಮಾರವಾಡಿಗಳ ಕುಟುಂಬ.

ಜುಂಝುನ್‌ವಾಲಾ ಅವರ ಮೊದಲ ದೊಡ್ಡ ಗಳಿಕೆ 1986ರಲ್ಲಿ ಸಿಕ್ಕಿತ್ತು. ತಮ್ಮ ಹೂಡಿಕೆಯ ಮೇಲೆ ಅವರು ₹ 5 ಲಕ್ಷ ಲಾಭ ಮಾಡಿದ್ದರು. ಅಲ್ಲಿಂದ ಮುಂದೆ ಅವರು ಹಿಂದಿರುಗಿ ನೋಡಿದ್ದೇ ಇಲ್ಲ. ಟೈಟಾನ್ ಕಂಪನಿಯಲ್ಲಿ ಅತಿದೊಡ್ಡ ಮೊತ್ತದ ಹೂಡಿಕೆಯನ್ನು ಮಾಡಿದ್ದರು. ಅದರಿಂದ ಭಾರಿ ಮೊತ್ತದ ಲಾಭವನ್ನೂ ಪಡೆದಿದ್ದರು. ಟೈಟಾನ್ ಮಾತ್ರವಲ್ಲದೆ ಟಾಟಾ ಕಾಂಗ್ಲೊಮೆರೇಟ್, ಸ್ಟಾರ್ ಹೆಲ್ತ್, ರ‍್ಯಾಲೀಸ್ ಇಂಡಿಯಾ, ಎಸ್ಕಾರ್ಟ್ಸ್, ಕೆನರಾ ಬ್ಯಾಂಕ್, ಇಂಡಿಯನ್ ಹೋಟೆಲ್ಸ್ ಕಂಪನಿ, ಆಗ್ರೊ ಟೆಕ್ ಫುಡ್ಸ್, ಟಾಟಾ ಮೋಟರ್ಸ್ ಕಂಪನಿಗಳಲ್ಲಿ ದೊಡ್ಡ ಮೊತ್ತದ ಹೂಡಿಕೆ ಮಾಡಿದ್ದರು. ಹಲವು ಕಂಪನಿಗಳನ್ನು ಹುಟ್ಟುಹಾಕಿದ ಅವರು, ಷೇರು ಹೂಡಿಕೆದಾರನ ಪಾತ್ರವನ್ನು ಮಾತ್ರ ಎಂದಿಗೂ ಬಿಟ್ಟುಕೊಡಲಿಲ್ಲ. ತಮ್ಮ ಒಟ್ಟು ವರಮಾನದ ನಾಲ್ಕನೇ ಒಂದು ಭಾಗವನ್ನು ಸಮಾಜ ಸೇವೆಗಾಗಿ ಅವರು ತೆಗೆದಿಟ್ಟಿದ್ದರು. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಬಡವರಿಗೆ ಸೌಲಭ್ಯಗಳನ್ನು ಒದಗಿಸಲು ದೊಡ್ಡ ಮೊತ್ತದ ದೇಣಿಗೆಯನ್ನು ನೀಡಿದ್ದರು.

ಜುಂಝುನ್‌ವಾಲಾ ಬಳಿ ಅಪಾರ ಹಣವಿದ್ದರೂ ಅದು ಎಲ್ಲ ಬಾರಿಯೂ ನೆರವಿಗೆ ಬರುತ್ತಿರಲಿಲ್ಲ. ದಕ್ಷಿಣ ಮುಂಬೈನಲ್ಲಿ ಮನೆ ಖರೀದಿಗೆ ಅವರು ನಡೆಸಿದ ಯತ್ನವು ಇದಕ್ಕೆ ಪುರಾವೆ. 14 ಫ್ಲ್ಯಾಟ್‌ಗಳ ಅಪಾರ್ಟ್‌ಮೆಂಟ್ ಕಟ್ಟಡವನ್ನು ಅವರು ಐದು ವರ್ಷಗಳಲ್ಲಿ ಹಲವು ಒಪ್ಪಂದಗಳ ಮೂಲಕ ಖರೀದಿಸಬೇಕಾಯಿತು. ಮುಂಚೂಣಿ ರೇಟಿಂಗ್ಸ್ ಸಂಸ್ಥೆಯಾಗಿರುವ ಕ್ರಿಸಿಲ್‌ನಲ್ಲಿನ ಷೇರುಗಳನ್ನು ಮಾರಾಟ ಮಾಡಿ ಅವರು ಅಪಾರ್ಟ್‌ಮೆಂಟ್ ಕಟ್ಟಡ ಖರೀದಿಸಿದ್ದರು. ಆ ಕಟ್ಟಡವನ್ನು ಬೀಳಿಸಿ, ಹೊಸ 14 ಮಹಡಿಯ ಮನೆ ಕಟ್ಟಿಸುತ್ತಿದ್ದರು.

ಹೂಡಿಕೆಯನ್ನು ಹಿಂಪಡೆಯುವುದೋ ಅಪಾರ್ಟ್‌ಮೆಂಟ್ ಖರೀದಿಸುವುದೋ ಎನ್ನುವುದು ಜುಂಝುನ್‌ವಾಲಾ ಅವರನ್ನು ಸಂದಿಗ್ಧಕ್ಕೆ ತಳ್ಳಿದ ಪ್ರಶ್ನೆಯಾಗಿತ್ತು. ಕೊನೆಗೆ ಕ್ರಿಸಿಲ್ ಷೇರುಗಳನ್ನು ಮಾರಾಟ ಮಾಡಲು ನಿರ್ಧರಿಸಿದ್ದರು. ಬಳಿಕ ಕ್ರಿಸಿಲ್ ಷೇರುಗಳಲ್ಲಿ ಕಂಡ ಮೌಲ್ಯವರ್ಧನೆಯ ಪ್ರಯೋಜನ ಜುಂಝುನ್‌ವಾಲಾ ಅವರಿಗೆ ಸಿಗಲಿಲ್ಲ. ಹೀಗಾಗಿ ಅವರು ತೀವ್ರವಾಗಿ ನೊಂದಿದ್ದರು. ಇತ್ತೀಚೆಗಷ್ಟೇ ಆಕಾಸಾ ವಿಮಾನಯಾನ ಕಂಪನಿಯನ್ನು ಅವರು ಆರಂಭಿಸಿದ್ದರು. ಆ ಕಂಪನಿ ಮುಂಬೈ–ಅಹಮದಾಬಾದ್ ಮಧ್ಯೆ ವಿಮಾನಯಾನ ಆರಂಭಿಸಿತ್ತು.

ಸಂಪತ್ತು ಸೃಷ್ಟಿಸುವ ಭರದಲ್ಲಿ ಸ್ವಂತ ಆರೋಗ್ಯವನ್ನೇ ಅವರು ಕಡೆಗಣಿಸಿದ್ದರು. ಕಿಡ್ನಿ ವೈಫಲ್ಯವೂ ಅವರನ್ನು ಕಾಡಿತ್ತು. ಡಯಾಲಿಸಿಸ್ ಮಾಡಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಜಿಹ್ವಾ ಚಪಲ ತಣಿಸುವುದರಲ್ಲೂ ಅವರಿಗೆ ವಿಶೇಷ ಆಸಕ್ತಿ ಇತ್ತು. ಒಳ್ಳೆಯ ಮದ್ಯವನ್ನೂ ಅವರು ಆಸ್ವಾದಿಸುತ್ತಿದ್ದರು. ಹವಾಮಾನ, ಸಾವು, ಮಾರುಕಟ್ಟೆಯ ಬಗ್ಗೆ ಖಚಿತವಾಗಿ ಹೇಳಲು ಯಾರಿಂದಲೂ ಸಾಧ್ಯವಿಲ್ಲ ಎನ್ನುವುದು ಜುಂಝುನ್‌ವಾಲಾ ಯಾವಾಗಲೂ ಹೇಳುವ ಮಾತಾಗಿತ್ತು. ಅಂತಹ ಸಾವು, ಅವರನ್ನೀಗ ದಿಢೀರ್ ಆಗಿ ಕರೆದೊಯ್ದಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.

Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,

Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.

RNI No 7891/65